SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 08

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e-ನ್ಯೂಸ್ ಲೆಟರ್ - ಅಕ್ಟೋಬರ್ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. - 574 216

## ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ 50 ಸಾವಿರ ಸಹಾಯ ಹಸ್ತ




## ಉಡುಪಿಯಲ್ಲಿ ವಸತಿಯುತ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ

## ಉಜಿರೆಯಲ್ಲಿ ರಕ್ತದಾನ ಶಿಬಿರ

## ನೇರ ನುಡಿ ಕಾರ್ಯಕ್ರಮ

## ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನಾಚರಣೆ

## ಸಲಹಾ ಸಮಿತಿ ಸಭೆ

## ತ್ಯಾಜ್ಯ ವಿಲೇವಾರಿಯ ಬಗ್ಗೆ ಮಾಹಿತಿ

**ಯಶೋಗಾಥೆ**

## ವಿಕಲಾಂಗ ಯುವ ಸಮೂಹಕ್ಕೆ ಪ್ರೇರಣೆಯಾದ ದಿನೇಶ್ ಬಜ್ಜೆ ಇವರ ಪುನಃಶ್ಚೇತನದ ಹಾದಿ

## ನಮ್ಮಿಂದಿಷ್ಟು

ಈ ತಿಂಗಳು ಉಡುಪಿಯಲ್ಲಿ ಎರಡು ದಿನಗಳ ಆರೋಗ್ಯ ತಪಾಸಣೆ ಹಾಗೂ ಮಾಹಿತಿ ಶಿಬಿರವನ್ನು ಉಚಿತವಾಗಿ ಹೈಟೆಕ್ ಆಸ್ಪತ್ರೆಯಲ್ಲಿ ನಡೆಸಲಾಯಿತು. ಗಮನ ಸೆಳೆಯುವ ವಿಷಯ ವೇನೆಂದರೆ, ಭಾಗವಹಿಸಿದವರಲ್ಲಿ ಅನೇಕರು ಅನೇಕ ವರ್ಷಗಳಿಂದ ಬೆನ್ನುಹುರಿ ಮುರಿತಕ್ಕೊಳಗಾಗಿ ಯಾವುದೇ ರೀತಿಯ ಮಾಹಿತಿಗಳನ್ನು ತರಬೇತಿಗಳನ್ನು ಪಡೆದುಕೊಂಡವರಾಗಿರಲಿಲ್ಲ, ಮತ್ತು ಅವರಲ್ಲಿ ಅನೇಕ ಮಂದಿ ಒತ್ತಡ ಗಾಯಕ್ಕೆ ಒಳಗಾಗಿರುವುದು ವಿಷಾದನೀಯ ಸಂಗತಿ.

ಒಟ್ಟಿನಲ್ಲಿ ನಿರಂತರವಾಗಿ ಬೆನ್ನುಹುರಿ ಅಪಘಾತ ಗೊಂಡವರಿಗೆ ಮಾನಸಿಕ ಸ್ಥೈರ್ಯ ತುಂಬಿ ಆತ್ಮವಿಶ್ವಾಸ ವೃದ್ಧಿಸುವ ಕೆಲಸ ಆಗಲೇಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ತಂಡವು ಆಸ್ಪತ್ರೆಗಳ ಸಂಯೋಜಕತ್ವದಲ್ಲಿ ಸೇವಾಧಾಮದ ಕಾರ್ಯವನ್ನು ಮುಂದುವರಿಸುವ ಸಲುವಾಗಿ ಕಾರ್ಯೋನ್ಮುಖವಾಗಿದೆ.

ಪ್ರತಿ ಶಿಬಿರಕ್ಕೂ ಸ್ಥಾನಿಯ ರೋಟರಿ ಕ್ಲಬ್ ಸಹಾಯ ಹಸ್ತ ನೀಡುವಂತೆ ಈ ಶಿಬಿರಕ್ಕೂ ಕಾಪು ರೋಟರಿ ಕ್ಲಬ್‌ನ ಸಹಕಾರ ಉಲ್ಲೇಖನೀಯ ಸಂಗತಿ.

ಕೇಂದ್ರದಲ್ಲಿ ದೀಪಾವಳಿ ಆಚರಣೆಯು ಒಂದು ಪ್ರೇರಣಾ ಕಾರ್ಯಕ್ರಮವಾಗಿತ್ತು. ಸನಿವಾಸಿಗಳು ದೀಪಾವಳಿಯನ್ನು ಆಚರಿಸುವುದರೊಂದಿಗೆ ತಾವು ಕೂಡ ಸಮುದಾಯದಲ್ಲೂ ಭಾಗವಹಿಸ ಬಹುದೆಂಬುದನ್ನು ಅರಿತುಕೊಳ್ಳಲು ಸಹಾಯ ವಾಯಿತು. ದೀಪ ಎಲ್ಲರ ಬಾಳಲ್ಲಿ ಬೆಳಕು ಚೆಲ್ಲಲಿ ಎಂದು ಹಾರೈಸೋಣ.

**ಸೇವಾ ಹಿ ಪರಮೋಧರ್ಮ**

ಇತೀ ತಮ್ಮವ
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**
ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**
ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**
ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

## ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ವಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜೊಯ್ಸ್ ಪಿರೇರಾ

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

## ನಿರ್ದೇಶಕರು

ಶ್ರೀ ರಾಯನ್ ಫೆರ್ನಾಂಡಿಸ್
ಶ್ರೀ ವಿಜಯ ಕೊಡವೂರು
ಡಾ. ಮುರಳೀಧರ ನಾಯಕ್

*I dont need easy, I just need possible*

# ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ 50 ಸಾವಿರ ಸಹಾಯ ಹಸ್ತ




**ಸೌತಡ್ಕ : 26/10/2022**

ನೈಮಿಷ ಹೌಸ್ ಆಫ್ ಸ್ಪೈಸಸ್ ಸೌತಡ್ಕ, ಕೊಕ್ಕಡ ಗ್ರಾಮ, ಬೆಳ್ತಂಗಡಿ ತಾಲೂಕು ಇವರು ತಮ್ಮ ಉದ್ಯಮದ ಮೂರನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ದೀಪಾವಳಿ ಹಬ್ಬದ ಲಕ್ಷ್ಮಿಪೂಜೆಯ ಸಂದರ್ಭದಲ್ಲಿ ಸೇವಾಭಾರತಿ ಸಂಸ್ಥೆಯು ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ನಡೆಸಲ್ಪಡುವ ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ ರೂ. 50,000/– ದ ಚೆಕ್ಕನ್ನು ಮಾಲೀಕರಾದ ಶ್ರೀ ಬಾಲಕೃಷ್ಣರವರು ಶ್ರೀ ಕೆ. ವಿನಾಯಕ ರಾವ್ (ಅಧ್ಯಕ್ಷರು, ಸೇವಾಭಾರತಿ) ಮತ್ತು ತಂಡಕ್ಕೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಸೌತಡ್ಕ ಇದರ ಅಧ್ಯಕ್ಷರಾದ ಶ್ರೀ ಕೃಷ್ಣ ಭಟ್ ಹಿತ್ತಿಲು, ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಕುಶಾಲಪ್ಪ ಗೌಡ ಪೂವಾಜೆ, ಶ್ರೀ ಬಾಲಕೃಷ್ಣ ನೈಮಿಷ ಇವರ ಮನೆಯವರು ಹಾಗೂ ಬಂಧು ಮಿತ್ರರು ಉಪಸ್ಥಿತರಿದ್ದರು. ಸಮಾಜದಿಂದ ಪಡೆದುಕೊಂಡ ಆದಾಯದ ಭಾಗಶಃವನ್ನು ಪುನಃ ಸಾಮಾಜಿಕ ಕಾರ್ಯಗಳಿಗೆ ಕೊಡುವ ಕಾರ್ಯ ನಿಜಕ್ಕೂ ಪ್ರೇರಣೆ ಆಗಿದೆ.

# ಉಡುಪಿ: ವಸತಿಯುತ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ






**ಉಡುಪಿ :** 20/10/2022, ಸೇವಾಭಾರತಿ– ಸೇವಾಧಾಮ, ಉಡುಪಿ ಜಿಲ್ಲೆ ಇದರ ಆಶ್ರಯದಲ್ಲಿ ಹೈಟೆಕ್ ಮೆಡಿಕೇರ್ ಆಸ್ಪತ್ರೆ ಅಂಬಲಪಾಡಿ, ಉಡುಪಿ; ರೋಟರಿ ಕ್ಲಬ್ ಕಾಪು; ಅಮ್ಮ ರಿಲಿಜಿಯಸ್ ಮತ್ತು ಚಾರಿಟೇಬಲ್ ಟ್ರಸ್ಟ್ (ರಿ) ಕಾಪು ಮತ್ತು ದಿವ್ಯಾಂಗ ರಕ್ಷಣಾ ಸಮಿತಿ, ಕೊಡವೂರು ಇವುಗಳ ಸಹಯೋಗದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ವಸತಿಯುತ 16ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ ಮತ್ತು 6 ಗಾಲಿಕುರ್ಚಿಗಳ ವಿತರಣೆ ಕಾರ್ಯಕ್ರಮವು 19 ಮತ್ತು 20 ಅಕ್ಟೋಬರ್ 2022 ಪೂರ್ವಾಹ್ನ 9:30 ರಿಂದ ಹೈಟೆಕ್ ಮೆಡಿಕಲ್ ಆಸ್ಪತ್ರೆ, ಅಂಬಲಪಾಡಿ ಉಡುಪಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಜೋನ್ 5 ರೋಟರಿ ಕ್ಲಬ್ ಸಹಾಯಕ ಗವರ್ನರ್ ಆಗಿರುವ ರೊ| ಡಾ. ಶಶಿಕಾಂತ ಕಾರಿಂಕ ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೇವಾಭಾರತಿಯ ಅಧ್ಯಕ್ಷರಾಗಿರುವ ಕೆ. ವಿನಾಯಕ ರಾವ್‌ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಅಮ್ಮ ಚಾರಿಟೇಬಲ್ ಟ್ರಸ್ಟ್ (ರಿ) ಕಾಪು ಇದರ ಅಧ್ಯಕ್ಷರಾದ ಶ್ರೀ ಕೆ . ವಾಸುದೇವ ಶೆಟ್ಟಿ, ಕೊಡವೂರು ನಗರಸಭಾ ಸದಸ್ಯರು ಮತ್ತು ದಿವ್ಯಾಂಗ ರಕ್ಷಣಾ ಸಮಿತಿಯ ಸಂಚಾಲಕರಾಗಿರುವ ಶ್ರೀ ಕೆ. ವಿಜಯ ಕೊಡವೂರು, ಹೈಟೆಕ್ ಮೆಡಿಕೇರ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾಗಿರುವ ಶ್ರೀಮತಿ ವಾಣಿ.ವಿ.ರಾವ್ ಹಾಗೂ ವೈದ್ಯಕೀಯ ನಿರ್ದೇಶಕರಾಗಿರುವ ಡಾ. ಟಿ.ಎಸ್.ರಾವ್ ಕಾಪು ರೋಟರಿ ಕ್ಲಬ್‌ನ ಅಧ್ಯಕ್ಷರಾಗಿರುವ ರೊ| ಕೆ. ಸದಾಶಿವ ಭಟ್, ಹೈಟೆಕ್ ಮೆಡಿಕೇರ್ ಆಸ್ಪತ್ರೆಯ ಸೀನಿಯರ್ ಆರ್ಥೋಪೆಡಿಕ್ ಸರ್ಜನ್ ಡಾ. ಉಮೇಶ್ ಪ್ರಭು, ಹಿಪ್ ಅಂಡ್ ಸ್ಪೈನಲ್ ಸೀನಿಯರ್ ಕನ್ಸಲ್ಟೆಂಟ್ ಎಸ್. ಪಿ. ಮೋಹಂತಿ, ಮಂಗಳೂರಿನ ಜ್ಯೋತಿ ಕೆ.ಎಂ.ಸಿ ಹಾಸ್ಪಿಟಲ್‌ನ ಕನ್ಸಲ್ಟೆಂಟ್ ಸ್ಪೈನ್ ಸರ್ಜನ್ ಈಶ್ವರ ಕೀರ್ತಿ, ಹಿರಿಯಡ್ಕ ಉದ್ಯಮಿಗಳಾದ ಶ್ರೀ ಕೃಷ್ಣಪ್ರಸಾದ್ ಶೆಟ್ಟಿ, ಉಡುಪಿ ದೇವಾಡಿಗ ಸಂಘದ ಅಧ್ಯಕ್ಷರಾಗಿರುವ ಶ್ರೀ ಗಣೇಶ್ ದೇವಾಡಿಗ, ಮಣಿಪಾಲ್ ಕೆ.ಎಂ.ಸಿ. ಆಸ್ಪತ್ರೆಯ ಡಾ. ಮೈತ್ರೆಯಿ ಉಪಸ್ಥಿತರಿದ್ದರು. ಮಂಜುಳಾ ವಿ. ಪ್ರಸಾದ್ ಹಾಗೂ ಯೋಗ ತರಬೇತಿದಾರರಾದ ರಮೇಶ್ ಸಾಲಿಯಾನ್ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಶಿಬಿರದಲ್ಲಿ ಭಾಗವಹಿಸಿದ ಫಲಾನುಭವಿಗಳಿಗೆ ಯೋಗ, ಫಿಜಿಯೋಥೆರಪಿ, ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ, ರಕ್ತದೊತ್ತಡ ಪರೀಕ್ಷೆ, ಆಪ್ತ ಸಮಾಲೋಚನೆ, ನುರಿತ ತಜ್ಞರಿಂದ ಕನ್ಸಲ್ಟೇಶನ್ ಸೇವೆಗಳನ್ನು ಉಚಿತವಾಗಿ ಒದಗಿಸಲಾಯಿತು. 20 ಅಕ್ಟೋಬರ್ 2022 ಸಂಜೆ ನಾಲ್ಕು ಗಂಟೆಗೆ ಸರಿಯಾಗಿ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರಸಭಾ ಸದಸ್ಯರು ಮತ್ತು ಕೊಡವೂರಿನ ದಿವ್ಯಾಂಗ ರಕ್ಷಣಾ ಸಮಿತಿಯ ಸಂಚಾಲಕರಾಗಿರುವ ಶ್ರೀ ಕೆ. ವಿಜಯ ಕೊಡವೂರು ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸೇವಾಭಾರತಿಯ ಸಲಹಾ ಮಂಡಳಿಯ ಸದಸ್ಯರಾಗಿರುವ ಶ್ರೀ ಸಿ ಎ. ಗುಜ್ಜಾಡಿ ಪ್ರಭಾಕರ್ ನರಸಿಂಹ ನಾಯಕ್, ಕಾರ್ಯದರ್ಶಿ ಶ್ರೀಮತಿ ಸ್ವರ್ಣಗೌರಿ, ಪಡುಬಿದ್ರಿ ಸಹಕಾರಿ ವ್ಯವಸಾಯಕ ಸೊಸೈಟಿಯ ಅಧ್ಯಕ್ಷರಾಗಿರುವ ಶ್ರೀ ಸುಧೀರ್ ಕುಮಾರ್, ಸೆಲ್ಕೋ ಸೋಲಾರ್ ಲೈಟ್ ಲಿಮಿಟೆಡ್‌ನ ಡಿ.ಜಿ.ಎಂ ಶ್ರೀ ಗುರುಪ್ರಕಾಶ್ ಶೆಟ್ಟಿ, ಹೆಜಮಾಡಿ ಪಂಚಾಯತ್ ಸದಸ್ಯರಾಗಿರುವ ಶ್ರೀ ಪ್ರಾಣೇಶ್, ಸೇವಾಭಾರತಿಯ ಸಲಹಾ ಮಂಡಳಿಯ ಸದಸ್ಯರಾಗಿರುವ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಪಿ.ಡಬ್ಲ್ಯೂ.ಡಿ ಕಂಟ್ರಾಕ್ಟರ್ ಅಜಿತ್ ಕೊಡವೂರು, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗ ಹಾಗೂ ದಿವ್ಯಾಂಗ ರಕ್ಷಣಾ ಸಮಿತಿಯ ಖಜಾಂಚಿ ಆಗಿರುವ ಜಯ ಪೂಜಾರಿ ಕಲ್ಮಾಡಿ, ಉಡುಪಿ ಸೇವಾಧಾಮದ ಸದಸ್ಯರಾಗಿರುವ ಸಂತೋಷ್ ಸುವರ್ಣ, ರಿಸರ್ಚ್ ಸ್ಕಾಲರ್ ಆಶಾಲತಾ, ಕಾಪು ರೋಟರಿ ಕ್ಲಬ್‌ನ ಕಾರ್ಯದರ್ಶಿ ಆಗಿರುವ ವಿದ್ಯಾಧರ ಪುರಾಣಿಕ್ ಇವರು ಸೇವಾಭಾರತಿಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು. ಶಿಬಿರದಿಂದ ಒಟ್ಟು 11 ಜನ ಬೆನ್ನುಹುರಿ ಅಪಘಾತಕ್ಕೊಳಗಾದವರು ಫಲಾನುಭವ ಪಡೆದುಕೊಂಡರು.

## ದಾನಿಗಳು



**ಕನ್ಯಾಡಿ 09/10/2022 :** ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಶಿರಡಿ ಸಾಯಿಬಾಬಾ ಭಿಕ್ಷಾ ಕೇಂದ್ರ ಮಂಗಳೂರು ಮತ್ತು ಮೂಡಬಿದ್ರೆಯ 8 ಜನರ ತಂಡ ಆಗಮಿಸಿ, ಸೇವಾಧಾಮದ ಸನಿವಾಸಿಗಳೊಂದಿಗೆ ಸಮಾಲೋಚಿಸಿ ಸೆಲ್ಫ್‌ಕೇರ್ ಕಿಟ್‌ಗಳನ್ನು ನೀಡಿರುತ್ತಾರೆ. ಸೇವಾಧಾಮದ ಕಾರ್ಯ ಚಟುವಟಿಕೆಗಳಿಗಾಗಿ ರೂ. 5000ವನ್ನು ದೇಣಿಗೆಯಾಗಿ ನೀಡಿರುತ್ತಾರೆ. ಸೇವಾಭಾರತಿಯ ಕಾರ್ಯದರ್ಶಿಯಾದ ಶ್ರೀಮತಿ ಸ್ವರ್ಣ ಗೌರಿ ಹಾಗೂ ಟ್ರಸ್ಟಿ ಶ್ರೀಯುತ ಬಾಲಕೃಷ್ಣ ಇವರು ಉಪಸ್ಥಿತರಿದ್ದರು.





**ಸೌತಡ್ಕ 18/10/2022**

ಮೈಸೂರಿನ ಜೆ.ಎಸ್.ಎಸ್ ಫಿಜಿಯೋಥೆರಪಿ ಕಾಲೇಜಿನ 10 ಜನ ವಿದ್ಯಾರ್ಥಿಗಳು ಹಾಗೂ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಸಿ.ಬಿ.ಆರ್ ವಿಭಾಗದ ಡಾ. ಸಂದೀಪ್. ಎಚ್ ಸೇವಾಧಾಮವನ್ನು ಭೇಟಿ ಮಾಡಿದರು. ಭೇಟಿಯ ಸಂದರ್ಭ ಸೇವಾಧಾಮದ ಚಟುವಟಿಕೆಗಳನ್ನು ಶ್ಲಾಘಿಸಿ, ರೂ. 2000 ವನ್ನೂ ಮುಂದಿನ ಸೇವಾಕಾರ್ಯಗಳಿಗಾಗಿ ಹಸ್ತಾಂತರಿಸಿದರು. ಅವರು ಭೇಟಿಯ ಸಂದರ್ಭದಲ್ಲಿ ಸನಿವಾಸಿಗಳ ಏಷ್ಯಾ ಸ್ಕೇಲ್ , ಗಾಯದ ಮಟ್ಟ ಗುರುತಿಸುವಿಕೆ, ಒತ್ತಡ ಗಾಯದ ಅರಿವು, ಐ.ಸಿ.ಎಫ್, ಗಾಲಿಕುರ್ಚಿಗಳ ಅಳತೆ, ಪುನಶ್ಚೇತನದ ಅಗತ್ಯ ಮತ್ತು ಕೇರ್ ಟೇಕರ್ ನ ಪಾತ್ರ ಇದರ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಿದರು.

## ಅಕ್ಟೋಬರ್ ತಿಂಗಳಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

| | |
|---|---|
| ನೈಮಿಷ ಸ್ಪೈಸಸ್ & ಕೆಫೆ, ಸೌತಡ್ಕ | 50,000/– |
| ಶ್ರೀ ಮಹಾಲಕ್ಷ್ಮೀ ಸೇವಾ ಪ್ರತಿಷ್ಠಾನ(ರಿ) ಮಣಿಲ, ಬಂಟ್ವಾಳ (ದಿನಸಿ) | 25,000/– |
| ಅಮ್ಮ ರಿಲಿಜಿಯಸ್ & ಚಾರಿಟೇಬಲ್ ಟ್ರಸ್ಟ್(ರಿ), ಕಾಪು, ಉಡುಪಿ | 17,500/– |
| ಬಿ.ಜೆ.ಪಿ., ಉಡುಪಿ ನಗರ (ಸೆಲ್ಫ್‌ಕೇರ್ ಕಿಟ್) | 12,500/– |
| ರೋಟರಿ ಕ್ಲಬ್, ಕಾಪು, ಉಡುಪಿ | 10,000/– |
| ಮೋಹನ್‌ಲಾಲ್ ಜೈರಾಣಿ ಕಪೂರ್ ಟ್ರಸ್ಟ್, ಬೆಂಗಳೂರು | 10,000/– |
| ಶಿರಡಿ ಸಾಯಿ ಭಿಕ್ಷಾ ಕೇಂದ್ರ, ಮಂಗಳೂರು | 5000/– |

## ಸೇವಾನಿಧಿ ದಾನಿಗಳು

| | |
|---|---|
| ಶ್ರೀ ಮಧ್ವಮೂರ್ತಿ, ಉಡುಪಿ | 5,001/– |
| ಶ್ರೀ ವಲೇರಿಯನ್ ಡಲ್ಮೆದಾ, ಮಂಗಳೂರು | 2,500/– |
| ಶ್ರೀ ಬಿ.ರಾಮ್‌ದಾಸ್ ಭಂಡಾರ್‌ಕರ್, ಉಜಿರೆ | 2,000/– |
| ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ | 2,000/– |
| ಶ್ರೀ ಬಿ.ಕೃಷ್ಣಪ್ಪ ಗುಡಿಗಾರ್ | 1,000/– |
| ಶ್ರೀ ಶ್ರೀಧರ್ ಕೆ.ವಿ., ಉಜಿರೆ | 1,000/– |
| ಶ್ರೀ ಕೆ.ಸೂರ್ಯನಾರಾಯಣ ರಾವ್, ಧರ್ಮಸ್ಥಳ | 1,000/– |
| ಶ್ರೀ ಅದ್ವೈತ್ ಪೈ, ಕನ್ಯಾಡಿ | 500/– |
| ಶ್ರೀಮತಿ ಬಬಿತ, ಕನ್ಯಾಡಿ | 500/– |
| ಶ್ರೀ ಕೆ. ಕಾರ್ತಿಕ್, ಧರ್ಮಸ್ಥಳ | 500/– |
| ಶ್ರೀ ದೇವದಾಸ್ ಪ್ರಭು, ಕನ್ಯಾಡಿ | 500/– |
| ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ | 500/– |
| ಶ್ರೀ ಮಧುಸೂದನ್, ಉಜಿರೆ | 500/– |
| ಶ್ರೀ ಶಿವಕುಮಾರ್, ಹಳೆಪೇಟೆ, ಉಜಿರೆ | 500/– |
| ಶ್ರೀಮತಿ ಛಾಯಾ ಸಿ.ಎಸ್., ಉಜಿರೆ | 500/– |
| ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ | 500/– |
| ಶ್ರೀ ರಜತ್ ಕುಮಾರ್ ಜೆ.ಡಿ. | 300/– |
| ಶ್ರೀ ಬಿ. ಪುರಂದರ | 200/– |

## ಮಹನೀಯ ದಾನಿಗಳು

| | |
|---|---|
| ಶ್ರೀ ನರೇಂದ್ರ ರೆಡ್ಡಿ, ಬೆಂಗಳೂರು | 10,000/– |
| ಶ್ರೀಮತಿ ವಿನುತ ಫಡ್ಕೆ, ಬೆಂಗಳೂರು | 10,000/– |
| ಶ್ರೀ ಉಮಾಮಹೇಶ್ವರ್ ವಿ., ಶಿವಮೊಗ್ಗ | 10,000/– |
| ಶ್ರೀ ಕೃಷ್ಣ ಜಿ. ಕೋಟ್ಯಾನ್, ಕೊಡವೂರು | 10,000/– |
| ಶ್ರೀ ಸಂದೀಪ್, ಬೆಂಗಳೂರು | 10,000/– |
| ಕು. ನಹುಷಾ ಶೆಟ್ಟಿ, ಕಾರ್ಕಳ | 6,500/– |
| ಡಾ. ಎಂ.ಕೆ.ಪ್ರಸಾದ್, ಆದರ್ಶ ಆಸ್ಪತ್ರೆ, ಪುತ್ತೂರು | 5,000/– |
| ಶ್ರೀ ಗೋಪಲಾಕೃಷ್ಣ ಜಿ., ಬೆಂಗಳೂರು | 5,000/– |
| ಶ್ರೀ ಸುಜೀಂದ್ರ ಪ್ರಭು, ಪುತ್ತೂರು | 5,000/– |
| ಡಾ. ಕೆ. ಅರುಣ್ ಕುಮಾರ್, ಶೃಂಗೇರಿ | 5,000/– |



**ಮಿತ್ತಬಾಗಿಲು : 04/10/2022,** ಯುವ ತೇಜಸ್ಸು ಟ್ರಸ್ಟ್ (ರಿ) ಇವರು ಬೆಳ್ತಂಗಡಿ ತಾಲೂಕಿನ ಮಿತ್ತಬಾಗಿಲು ಗ್ರಾಮದ ಕಲ್ಲಂಡ ಎಂಬಲ್ಲಿ ನಿರ್ಮಿಸಿರುವ ಸ್ಟೀಲ್ ಬ್ರಿಡ್ಜ್‌ನ ಉದ್ಘಾಟನಾ ಸಮಾರಂಭದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರಾಗಿರುವ ಶ್ರೀಯುತ ಕೆ. ವಿನಾಯಕ ರಾವ್ ಇವರ ಸಮಾಜ ಸೇವೆಯನ್ನು ಗುರುತಿಸಿ ಗೌರವಿಸಿದರು.

## ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನಾಚರಣೆ



**ಸೌತಡ್ಕ :** 02/10/2022

ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನಾಚರಣೆಯನ್ನು ಧರ್ಮಸ್ಥಳ ಎಸ್.ಡಿ.ಎಮ್ ಆಂಗ್ಲ ಮಾಧ್ಯಮ ಶಾಲಾ ವತಿಯಿಂದ ಸೌತಡ್ಕ ಪುನಃಶ್ಚೇತನ ಕೇಂದ್ರದಲ್ಲಿ ಆಚರಣೆ ಮಾಡಲಾಯಿತು. ಗಾಂಧೀಜಿ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿ ಅವರ ಕುರಿತು ಮಾತನಾಡಿದರು.

ಮಕ್ಕಳು ಹಾಡು ಮತ್ತು ನೃತ್ಯದೊಂದಿಗೆ ಎಲ್ಲರನ್ನು ಮನರಂಜಿಸಿದರು. ಶಾಲಾ ಮಕ್ಕಳು, ಅಧ್ಯಾಪಕ ವೃಂದ ಶಾಲಾ ಸಿಬ್ಬಂದಿಗಳು ಮಕ್ಕಳ ಪೋಷಕರು ಭಾಗವಹಿಸಿದ ಈ ಕಾರ್ಯಕ್ರಮದಲ್ಲಿ ಸೇವಾಧಾಮದ ಸನಿವಾಸಿಗಳಿಗೆ ಸೆಲ್ಫ್‌ಕೇರ್ ಕಿಟ್ ಮತ್ತು ಹಣ್ಣು ಹಂಪಲುಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಸೇವಾ ಭಾರತಿಯ ಟ್ರಸ್ಟಿ ಬಾಲಕೃಷ್ಣರವರು ಉಪಸ್ಥಿತರಿದ್ದರು. ಸೇವಾಧಾಮದ ಚಟುವಟಿಕೆಗಳನ್ನು ಶ್ಲಾಘಿಸಿ, ರೂ. 2000ವನ್ನು ಸೇವಾಕಾರ್ಯಗಳಿಗೆ ಹಸ್ತಾಂತರಿಸಿದರು.




**ಕನ್ಯಾಡಿ:** ಶ್ರೀಯುತ ಹರಿದಾಸ್ ಹಾಗೂ ರೆಡ್ ಕ್ರಾಸ್ ಸೊಸೈಟಿಯ ತಂಡ ಮಂಗಳೂರು ಇವರು ಸೇವಾಧಾಮ ಕೇಂದ್ರವನ್ನು ಭೇಟಿ ಮಾಡಿ ಕೇಂದ್ರದ ಸಿಬ್ಬಂದಿಗಳು ಹಾಗೂ ಫಲಾನುಭವಿಗಳ ಜೊತೆ ಮಾತನಾಡಿ ಕೇಂದ್ರದ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿದುಕೊಂಡರು.

## ನಮ್ಮ ಭೇಟಿಗಳು

**ಉಡುಪಿ:** 12/10/2022, ಉಡುಪಿ ಜಿಲ್ಲೆಯ ಪಡುಬಿದ್ರಿ ಸಹಕಾರಿ ವ್ಯವಸಾಯಿಕ ಸೊಸೈಟಿ (ನಿ) ಇದರ ಅಧ್ಯಕ್ಷರಾದ ಶ್ರೀ ವೈ. ಸುಧೀರ್ ಕುಮಾರ್ ಇವರನ್ನು ನಮ್ಮ ತಂಡವು ಭೇಟಿ ಮಾಡಿ ಸೇವಾಧಾಮದ ಕಾರ್ಯ ಚಟುವಟಿಕೆಗಳಿಗಾಗಿ ಸಹಾಯ ಹಸ್ತ ನೀಡುವಂತೆ ವಿನಂತಿಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಹೆಜಮಾಡಿ ಪಂಚಾಯಿತಿ ಸದಸ್ಯರು, ಸೇವಾಧಾಮದ ಹಿತೈಷಿಗಳು ಆದ ಶ್ರೀ ಪ್ರಾಣೇಶ್ ಹೆಜಮಾಡಿ ಸಹಕರಿಸಿದರು. ತಂಡದಲ್ಲಿ ಕೆ. ವಿನಾಯಕ ರಾವ್ ಮತ್ತು ಚರಣ್ ಎಂ. ಉಪಸ್ಥಿತರಿದ್ದರು.



### ಶ್ರೀ ಕಲ್ಲಡ್ಕ ಪ್ರಭಾಕರ ಭಟ್ ಅವರೊಂದಿಗೆ ಸಂವಾದ

**ಕಲ್ಲಡ್ಕ** 28.10.2022: ಬೆನ್ನುಹುರಿ ಗಾಯಗೊಂಡ ವರಿಗೆ ವಿಸ್ತೃತ ಸೇವೆಗಳನ್ನು ಒದಗಿಸುವ ಸಲುವಾಗಿ ಸೇವಾಭಾರತಿ ಅಧ್ಯಕ್ಷರಾದ ಶ್ರೀ ಕೆ.ವಿನಾಯಕ ರಾವ್ ಮತ್ತು ತಂಡವು ಆರ್‌ಎಸ್‌ಎಸ್ ನಾಯಕರಾದ ಶ್ರೀ ಕಲ್ಲಡ್ಕ ಪ್ರಭಾಕರ ಭಟ್ ಅವರೊಂದಿಗೆ ಸಂವಾದ ನಡೆಸಿತು. ಸೇವಾಭಾರತಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಬೆಂಬಲ ಕೋರಿದರು.

## ಉಜಿರೆಯಲ್ಲಿ ರಕ್ತದಾನ ಶಿಬಿರ




**ಉಜಿರೆ :** 09/10/2022, ಸೇವಾಭಾರತಿ ಕನ್ಯಾಡಿ, ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ, ರೋಟರಿ ಕ್ಲಬ್ ಬೆಳ್ತಂಗಡಿ ಬ್ಲಡ್ ಬ್ಯಾಂಕ್, ಜಿಲ್ಲಾ ಸರಕಾರಿ ವೆನ್ಲಾಕ್ ಆಸ್ಪತ್ರೆ, ಮಂಗಳೂರು ಇವುಗಳ ಸಹಯೋಗದೊಂದಿಗೆ ಅಕ್ಟೋಬರ್ 9ರಂದು ಶರತ್ ಕೃಷ್ಣ ಪಡ್ವೆಟ್ನಾಯ ಇವರು ಉಜಿರೆ ಶಾರದಾ ಮಂಟಪದಲ್ಲಿ ನಡೆದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು. ವೈದ್ಯಕೀಯ ಸಲಹೆಗಾರ ಶ್ರೀಧರ್.ಕೆ.ವಿ. ಶುಭ ಹಾರೈಸಿದರು. ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ ಉಜಿರೆ ಇದರ ಅಧ್ಯಕ್ಷ ಧರ್ಣಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಕನ್ಯಾಡಿ ಸೇವಾಭಾರತಿ ಅಧ್ಯಕ್ಷ ವಿನಾಯಕ ರಾವ್ ವೆನ್‌ಲಾಕ್ ರಕ್ತನಿಧಿ ವಿಭಾಗದ ತಾಂತ್ರಿಕ ಮೇಲುಸ್ತುವಾರಿ ಅಶೋಕ್, ಡಾ. ಸವಿ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ, ಗೌರವಾಧ್ಯಕ್ಷ ಪ್ರಕಾಶ್ ಗೌಡ, ಪ್ರಗತಿ ಮಹಿಳಾ ಮಂಡಲ ಕಾರ್ಯದರ್ಶಿ ಗಾಯತ್ರಿ ಶ್ರೀಧರ್ ಸಹಿತ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು. ಒಕ್ಕಲಿಗರ ಸೇವಾ ಸಮಿತಿ ಉಪಾಧ್ಯಕ್ಷ ಗೋಪಾಲಕೃಷ್ಣ.ಜಿ.ಕೆ. ನಿರೂಪಿಸಿ ರಮೇಶ್ ಪೇಲಾರ್ ವಂದಿಸಿದರು. ಒಟ್ಟು 102 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

## ತ್ಯಾಜ್ಯ ವಿಲೇವಾರಿಯ ಬಗ್ಗೆ ಮಾಹಿತಿ




**ಸೌತಡ್ಕ :** ಸೇವಾಧಾಮ ಸೌತಡ್ಕದಲ್ಲಿ ಅಕ್ಟೋಬರ್ ತಿಂಗಳ ಸೇವಾಭಾರತಿಯ ಸಿಬ್ಬಂದಿಗಳ ಸಭೆಯೊಂದಿಗೆ ಈ ದಿನ ಸಂಪನ್ಮೂಲ ವ್ಯಕ್ತಿಯಾಗಿ ಬೆಳ್ತಂಗಡಿಯ ತಾಲೂಕು ಆರೋಗ್ಯಾಧಿಕಾರಿಯವರಾದ ಡಾ॥ ಪ್ರಕಾಶ್ ತ್ಯಾಜ್ಯ ವಿಲೇವಾರಿಯ ಬಗ್ಗೆ ಹಾಗೂ ಹೇಗೆ ವಿಂಗಡಿಸಬಹುದು ಎನ್ನುವುದನ್ನು ಹಾಗೂ ಅದರಿಂದಾಗುವ ಅಪಾಯದ ಬಗ್ಗೆ ತಿಳಿಸಿದರು.




**ಬೆಂಗಳೂರು :** ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ಇಂಡಿಯಾ ಕೇರ್ಸ್ ಆಯೋಜಿಸಿದ ಫನ್ ರೇಸಿಂಗ್ ಲೈಫ್ ಮ್ಯೂಸಿಕ್ ಶೋ ಸಂಜೆ 6 ಗಂಟೆಗೆ ಪ್ರಾರಂಭಗೊಂಡು ರಾತ್ರಿ 11 ಗಂಟೆಯವರೆಗೆ ಮುಂದುವರೆದಿದ್ದ ಕಾರ್ಯಕ್ರಮದಲ್ಲಿ ಸೇವಾಭಾರತಿಯ ದಾನಿ ಸಂಸ್ಥೆಗಳಾದ ಕೆಮ್ ಟ್ರೆಂಡಿನ ಶ್ರೀಯುತ ಎನ್.ಎಂ.ಕಾರ್ಯಪ್ಪ, ಏರಿಯಾ ಮ್ಯಾನೇಜರ್ ಸೌತ್, ಪುಟ್ಟಸ್ವಾಮಿ ಪ್ರೊಫೆಸರ್ ಬಿ.ಎಂ.ಎಸ್. ಕಾಲೇಜು ಬೆಂಗಳೂರು ಮಹಾನೀಯ ದಾನಿಗಳಾದ ಶ್ರೀಮತಿ ಗಾಯತ್ರಿ ಡಾ. ಅರ್ಚನಾ ಸೇವಾನಿಧಿ ದಾನಿಗಳಾದ ಛಾಯಾ ಹಾಗೂ ಸೇವಾಭಾರತಿಯ ಸಿಬ್ಬಂದಿಗಳಾದ ಚರಣ್ ಎಂ, ಮೋಹನ್ ಎಸ್, ಮನು ಆರ್, ಆಶ್ರಿತ್ ಸಿ.ಪಿ , ಅಖಿಲೇಶ್ ಎಸ್. ಹಾಗೂ ಇವರು ಭಾಗವಹಿಸಿದ್ದರು.

## ಸಲಹಾ ಸಮಿತಿ ಸಭೆ

**ಕನ್ಯಾಡಿ:** ಸಲಹಾ ಸಮಿತಿ ಸಭೆ ಬೆಳಿಗ್ಗೆ 10.30 ಕ್ಕೆ ಸರಿಯಾಗಿ ಸೇವಾಭಾರತಿಯ ಅಧ್ಯಕ್ಷರಾದ ಕೆ.ವಿನಾಯಕ ರಾವ್‌ರವರ ನಿವಾಸದಲ್ಲಿ ಸಲಹಾ ಸಮಿತಿ ಸಭೆ ಏರ್ಪಡಿಸಲಾಗಿತ್ತು. ಸಭೆಯಲ್ಲಿ ಭಾಗವಹಿಸಿದವರು:–

ಶ್ರೀ ಕೆ. ವಿನಾಯಕ ರಾವ್, ಅಧ್ಯಕ್ಷರು; ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಖಜಾಂಜಿ; ಶ್ರೀಮತಿ ಸ್ವರ್ಣಗೌರಿ, ಕಾರ್ಯದರ್ಶಿ; ಶ್ರೀ ಉದಯ ಶಂಕರ್, ಸಲಹಾ ಸಮಿತಿ ಸದಸ್ಯರು; ಶ್ರೀಮತಿ ಜಾಯ್ಸ್ ಪಿರೇರಾ, ಸಲಹಾ ಸಮಿತಿ ಸದಸ್ಯರು; ಶ್ರೀಮತಿ ಮನೋರಮಾ ಭಟ್, ಸಲಹಾ ಸಮಿತಿ ಸದಸ್ಯರು; ಶ್ರೀ ಕೆ. ಪುರಂದರ ರಾವ್, ಸಂಚಾಲಕರು ಸೇವಾಧಾಮ



**ಉಡುಪಿ :** ಕೆನರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಜನರಲ್ ಮ್ಯಾನೇಜರ್ ಆದ ಶ್ರೀ ವಾದಿರಾಜ್ ಅವರನ್ನು, ಸೇವಾಧಾಮದ ನಿರ್ದೇಶಕರಾಗಿರುವ ಹಾಗೂ ದಿವ್ಯಾಂಗ ರಕ್ಷಣಾ ಸಮಿತಿ ಕೊಡವೂರು ಇದರ ಸಂಚಾಲಕರಾದ ಶ್ರೀ ವಿಜಯ ಕೊಡವೂರು ಭೇಟಿ ಮಾಡಿ ಸೇವಾಧಾಮ ಸೇವಾಭಾರತಿಯ ಕಾರ್ಯಚಟುವಟಿಕೆಗಳನ್ನು ವಿವರಿಸಿ, ಸೇವಾಧಾಮದ ಕಾರ್ಯ ಚಟುವಟಿಕೆಗಳಿಗೆ ಸಹಾಯ ಹಸ್ತ ಮಾಡುವಂತೆ ಮನವಿ ಪತ್ರವನ್ನು ಸಲ್ಲಿಸಿದರು ಈ ಸಂದರ್ಭದಲ್ಲಿ ಶ್ರೀ ಪ್ರಶಾಂತ್ ಭಂಡಾರಿ ಮ್ಯಾನೇಜರ್ ಇವರು ಉಪಸ್ಥಿತರಿದ್ದರು.

### ಗಾಲಿಕುರ್ಚಿ ಪಡೆದುಕೊಂಡವರು



ಯಶ್ವಂತ್ ಸುವರ್ಣ, ಪಿಲಾರ್
ವಾಸುದೇವ ಆಚಾರ್ಯ, ಪಾಲಿಮಾರ್
ಶ್ರೀಶಾ ಶೆಟ್ಟಿ, ಕಾಪು
ಜಗದೀಶ್ ಸುವರ್ಣ, ಹೆಜಮಾಡಿ
ನಿತ್ಯಾನಂದ ಶೆಟ್ಟಿ, ತೆಂಕಯರ್ಮಾಲ್
ಶಶಿಧರ ಪೂಜಾರಿ, ಮುಂದ್ಕೂರು

## ಸೇವಾಧಾಮ ಪುನಃಶ್ಚೇತನ ಕೇಂದ್ರ ಸೌತಡ್ಕದಲ್ಲಿ ಸಂಜೆ ದೀಪಾವಳಿ ಆಚರಣೆ





**ಸೌತಡ್ಕ:** ಸೇವಾಧಾಮ ಪುನಃಶ್ಚೇತನ ಕೇಂದ್ರ ಸೌತಡ್ಕದಲ್ಲಿ 24–10–2022 ಸೋಮವಾರದಂದು ಸಂಜೆ ದೀಪಾವಳಿ ಆಚರಣೆಯನ್ನು, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ ಭಟ್ ಇವರು ದೀಪ ಬೆಳಗಿಸಿ ಉದ್ಘಾಟಿಸಿ ಎಲ್ಲರಿಗೂ ಶುಭ ಹಾರೈಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿತು. ಈ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್, ಟ್ರಸ್ಟಿ ಶ್ರೀಯುತ ಬಾಲಕೃಷ್ಣ, ಸಲಹಾ ಸಮಿತಿಯ ಸದಸ್ಯರಾದ ಶ್ರೀಯುತ ಉದಯ ಶಂಕರ್ ಹಾಗೂ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸೀನಿಯರ್ ಮ್ಯಾನೇಜರ್ ಚರಣ್ ಎಂ. ನಿರೂಪಿಸಿದ ಕಾರ್ಯಕ್ರಮದಲ್ಲಿ ಸನಿವಾಸಿ ಚಂದ್ರಶೇಖರ ಭಟ್ ಪ್ರಾರ್ಥಿಸಿ, ಅಧ್ಯಕ್ಷರಾದ ಶ್ರೀಯುತ ಕೆ. ವಿನಾಯಕ ರಾವ್ ಇವರು ವಂದಿಸಿದರು. ಪಟಾಕಿ ಸಿಡಿಸಿ ಸಂಭ್ರಮಿಸುತ್ತಾ ಕಾರ್ಯಕ್ರಮ ರಾತ್ರಿ ಭೋಜನದೊಂದಿಗೆ ಮುಕ್ತಾಯವಾಯಿತು.

*Life would be tragic if it weren't funny*

## ನೇರ ನುಡಿ ಕಾರ್ಯಕ್ರಮ




**ಉಡುಪಿ:** 16 ನೇ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಉಚಿತ ವಸತಿಯುತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ ಮತ್ತು 10 ಗಾಲಿಕುರ್ಚಿಗಳ ವಿತರಣೆ ಸೇವಾಭಾರತಿ ಬೆಳ್ತಂಗಡಿಯ ಆಶ್ರಯದಲ್ಲಿ ಆಸ್ಪತ್ರೆ ಅಂಬಲಪಾಡಿ ಉಡುಪಿ ರೋಟರಿ ಕ್ಲಬ್ ಕಾಪು ಮತ್ತು ದಿವ್ಯಾಂಗ ರಕ್ಷಣಾ ಸಮಿತಿ ಕೊಡವೂರು ಇವರ ಸಹಯೋಗದಲ್ಲಿ ಅಕ್ಟೋಬರ್ 19 ಮತ್ತು 20ರಂದು ಹೈಟೆಕ್ ಮೆಡಿಕಲ್ ಆಸ್ಪತ್ರೆ ಅಂಬಲಪಾಡಿ ಉಡುಪಿಯಲ್ಲಿ ನಡೆಸುವುದಾಗಿಯು ಯು–ಪ್ಲಸ್ ಚಾನೆಲ್‌ನ ನೇರ ನುಡಿ ಕಾರ್ಯಕ್ರಮದಲ್ಲಿ ತಿಳಿಸಲಾಯಿತು. ಈ ವೇಳೆಯಲ್ಲಿ ವಿಜಯಕೊಡವೂರು ಅವರು ಉಪಸ್ಥಿತರಿದ್ದರು.

## ಎ.ಜೆ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ಭೇಟಿ



**ಮಂಗಳೂರು** 28.10.2022: ಶ್ರೀ ಕೆ.ವಿನಾಯಕ ರಾವ್(ಅಧ್ಯಕ್ಷರು, ಸೇವಾಭಾರತಿ) ಮತ್ತು ತಂಡವು ಮಂಗಳೂರು ಎ.ಜೆ.ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ವೈದ್ಯಕೀಯ ನಿರ್ದೇಶಕರಾದ ಡಾ. ಪ್ರಶಾಂತ್ ಮಾರ್ಲ ಹಾಗೂ ರಕ್ತನಿಧಿಯ ಗುಣಮಟ್ಟ ಮತ್ತು ತಾಂತ್ರಿಕ ನಿರ್ವಾಹಕರಾದ ಶ್ರೀ ಪಿ.ಆರ್.ಗೋಪಾಲಕೃಷ್ಣನ್ನು ಭೇಟಿ ಮಾಡಿ ಬೆನ್ನುಹುರಿ ಗಾಯಗೊಂಡವರಿಗೆ ಅಗತ್ಯವಿರುವ ವೈದ್ಯಕೀಯ ಬೆಂಬಲದ ಬಗ್ಗೆ ಚರ್ಚಿಸಲಾಗಿದೆ ಮತ್ತು ಬೆಂಬಲಕ್ಕಾಗಿ ವಿನಂತಿಸಲಾಗಿದ್ದು, ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ.

## ಆನ್‌ಲೈನ್ ಕಾರ್ಯಗಾರ




**ಸೌತಡ್ಕ:** 10/10/2022

ಸೇವಾಭಾರತಿಯಿಂದ ಪ್ರತಿ ತಿಂಗಳ ಎರಡನೇ ಸೋಮವಾರದಂದು "ಸೇವಾ ಸಂಗಮ" ಎಂಬ ಶೀರ್ಷಿಕೆಯಡಿ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ಸಂಬಂಧಪಟ್ಟ ವಿವಿಧ ವಿಷಯಗಳ ಬಗ್ಗೆ ವಿವಿಧ ನುರಿತ ಸಂಪನ್ಮೂಲ ವ್ಯಕ್ತಿಗಳ ಮೂಲಕ ಅರಿವು ನೀಡುವ ಕಾರ್ಯಕ್ರಮವನ್ನು ಗೂಗಲ್ ಮೀಟ್‌ನ ಮೂಲಕ ಹಮ್ಮಿಕೊಳ್ಳಲಾಗಿಯಿತು.

'ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ಸರ್ಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ' ವಿಷಯವಾಗಿ ಸಂಪನ್ಮೂಲ ವ್ಯಕ್ತಿ ಶ್ರೀ ನಾಗೇಂದ್ರ ಕುಮಾರ್ ಬಿ. ಎನ್ ಬೆಂಗಳೂರು ಮಾತನಾಡಿದರು.

ಕಾರ್ಯಕ್ರಮದಲ್ಲಿ 72 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

**ಆರೋಗ್ಯ ಸ್ಪರ್ಶ** : ಉಡುಪಿ ಜಿಲ್ಲೆಯಲ್ಲಿರುವ ಬೆನ್ನು ಹುರಿ ಅಪಘಾತ ಗೊಂಡವರಿಗಾಗಿ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಮನೆಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ.

**ಸಾಮರ್ಥ್ಯಮ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ವೃತ್ತಿ ತರಬೇತಿಗಳು.

**ಸೇವಾ ಚರಣ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಸಾಧನ ಸಲಕರಣೆಗಳ ಸಹಾಯ.

**ಸೇವಾನಿರ್ಮಲ**: ದಿವ್ಯಾಂಗ ಸ್ನೇಹಿ ಶೌಚಾಲಯ ಮತ್ತು ರ್‍ಯಾಂಪ್‌ಗಳಿಗೆ ಭಾಗಶಃ ಧನ ಸಹಾಯ.

**ಆರೋಗ್ಯ ಸಿಂಧು**: ಆರೋಗ್ಯ ತಪಾಸಣೆ ಮಾಹಿತಿ ಹಾಗೂ ತರಬೇತಿಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ವಿಕಲಾಂಗ ಯುವ ಸಮೂಹಕ್ಕೆ ಪ್ರೇರಣೆಯಾದ

## ದಿನೇಶ್ ಬಜ್ಪೆ ಇವರ ಪುನಃಶ್ಚೇತನದ ಹಾದಿ

**ಯಶೋಗಾಥೆ**

**ಬಜ್ಪೆ : ಸಮಯಪ್ರಜ್ಞೆ ಮನುಷ್ಯನ ಬದುಕಿನ ವೇಗವನ್ನು ಸಾಧನೆಯತ್ತ ಪರಿವರ್ತಿಸಬಲ್ಲದಾಗಿದೆ. ಆದರೆ ಜೀವನದ ಕೆಲವೊಂದು ನಿಸ್ತೇಜ ಸಮಯಗಳು ಬದುಕಿನ ಹಳಿಯನ್ನೇ ಮೊಟಕುಗೊಳಿಸಬಲ್ಲದು. ಒಬ್ಬ ಮನುಷ್ಯ ಬಾಲ್ಯದಿಂದಲೇ ತಾನು ಇಂತಹಾ ದಿಕ್ಕಿನತ್ತ ಸಾಗಬೇಕಾದರೆ ಯಾವ ರೀತಿಯ ಶಿಕ್ಷಣ, ಸಂಸ್ಕಾರ ಪಡೆಯಬೇಕೆಂದು ಸ್ವ ಚಿಂತನೆಯಿಂದ ಅಥವಾ ಗುರುಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾನೆ. ಆದರೆ ವಿಧಿಯ ಲೆಕ್ಕಾಚಾರವೇ ಬೇರೆಯೇ ಆಗಿದ್ದರೆ ಕೆಲವರ ಯಾನ ವಜ್ರದಂತೆ ಕಂಡರೂ ಹೊಳಪಿಲ್ಲದ ಕಲ್ಲಾಗಲೂ ಬಹುದು. ಆದರೆ ಅದೇ ಕಲ್ಲು ಶಿಲೆಯ ರೂಪವನ್ನು ಪಡೆದು ಲಕ್ಷೋಪ ಮಂದಿಯ ಆರಾಧ್ಯ ಮೂರ್ತಿಯೂ ಆಗಬಹುದು.**

**ನಾವಿಂದು ಹೇಳಲು ಹೊರಟಿರುವುದು ನಿಸ್ತೇಜಗೊಂಡಿದ್ದ ಯುವಕನ ಸಾಧನೆಯ ಮೈಲಿಗಲ್ಲಿನ ಒಂದು ಚಿತ್ರಣವನ್ನು. ಬಜ್ಪೆ ಮಳವೂರು ಗ್ರಾಮದ ಸಿದ್ದಾರ್ಥ ನಗರದ ಸಂಜೀವ ಮತ್ತು ದೇವಕಿ ಅವರ ಮೂವರು ಮಕ್ಕಳಲ್ಲಿ ದ್ವಿತೀಯ ಪುತ್ರನಾಗಿ 1998 ಏಪ್ರಿಲ್ 8 ರಂದು ಜನಿಸಿದ ದಿನೇಶ್ ಅವರ ಕಥನವಿದು.**



ದಿನೇಶ್ ಅವರದು ಸಾಮಾನ್ಯರಂತೆ ಬದುಕು ಕಟ್ಟಿಕೊಂಡ ಕುಟುಂಬ. ಆದರೆ ಸಂಕಷ್ಟ ಮಾತ್ರ ಎಲ್ಲರಿಂದ ವಿಭಿನ್ನ. ಕಾರಣ ಕುಟುಂಬದ ಆಧಾರವಾಗಿದ್ದ ದಿನೇಶ್ ಅವರು ಬೆನ್ನುಹುರಿ ಅಪಘಾತಕ್ಕೊಳಗಾಗಿದ್ದು. ಸರಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಬಜ್ಪೆಯ ಸ್ಯೆಂಟ್ ಜೋಸೆಫ್ ಖಾಸಗಿ ಶಾಲೆಯಲ್ಲಿ ಹೈಸ್ಕೂಲು ಹಾಗೂ ಪದವಿಪೂರ್ವ ಶಿಕ್ಷಣವನ್ನು ಮುಗಿಸಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಕಾಂ ಪದವಿ ಶಿಕ್ಷಣದ ಎರಡನೇ ವರ್ಷದ ಪರೀಕ್ಷೆಯನ್ನು ಮುಗಿಸಿದ ದಿನೇಶ್ ರಜೆಯಲ್ಲಿ ತನ್ನ ಮುಂದಿನ ವರ್ಷದ ಪದವಿ ಶಿಕ್ಷಣಕ್ಕೆ ಬೇಕಾದ ಹಣಕಾಸಿನ ಹೊಂದಾಣಿಕೆಗಾಗಿ ಪ್ಯೆಂಟಿಂಗ್ ಕೆಲಸಕ್ಕೆ ಸೇರಿದ್ದರು. ಹೀಗೆ ಅವರ ಕುಟುಂಬದ ನಿರ್ವಹಣೆಯೂ ಒಂದು ಮಟ್ಟಕ್ಕೆ ತಲುಪಿರುವಾಗಲೆ 12–05–2017 ರಂದು ಕೆಲಸದ ಜಾಗದಲ್ಲಿ ಕಟ್ಟಡದ ಪೇಂಟಿಂಗ್ ಮಾಡುತ್ತಿರುವಾಗ ಕಾಲು ಜಾರಿ ಆಯತಪ್ಪಿ ಕೆಳಕ್ಕೆ ಬಿದ್ದು ಬಿಟ್ಟಿದ್ದರು. ಬಳಿಕ ನಡೆದದ್ದೆಲ್ಲ ಗ್ರಹಣರೂಪ.

ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಾದ ಅವರಿಗೆ ವೈದ್ಯರು ಬೆನ್ನು ಹುರಿ ಅಪಘಾತಕ್ಕೊಳಗಾಗಿದ್ದಾರೆ ಎಂಬುದನ್ನು ಖಚಿತ ಪಡಿಸಿದರು. ಆಸ್ಪತ್ರೆಯ ಚಿಕಿತ್ಸೆಯ ನಂತರ ಮನೆಯಲ್ಲಿ ಆರು ತಿಂಗಳು ಕಳೆಯಬೇಕಾದ ಪರಿಸ್ಥಿತಿ ಎದುರಾಯಿತು. ಆಸ್ಪತ್ರೆಯ ಮುಖಾಂತರ ಫಿಜಿಯೋಥೆರಪಿ ಮತ್ತು ಮನೆಯವರ ಸಹಾಯದಿಂದ ಬೆಡ್‌ನಿಂದ ವೀಲ್ ಚೇರ್‌ಗೆ ಸ್ವತಃ ತಾವೇ ಕುಳಿತುಕೊಳ್ಳುವ ಮಟ್ಟಿಗೆ ಅಭ್ಯಾಸವನ್ನು ಮಾಡಿದರು. ನಿತ್ಯಕರ್ಮಕ್ಕೆ ಕೆಥೆಟರ್ ಅನ್ನು ಉಪಯೋಗಿಸಬೇಕಿತ್ತು. ತಮ್ಮ ದಿನ ನಿತ್ಯದ ಕಾರ್ಯವೈಖರಿ ಮುಂದುವರೆಸುತ್ತಾ ತಾಯಿ ಮತ್ತು ಅಕ್ಕನನ್ನೇ ಅವಲಂಬಿಸಬೇಕಾಯಿತು. ತಮ್ಮ ಜೀವನವೂ ಅವರಿಂದಲೇ ಸಾಗಬೇಕಿತ್ತು ಎಂಬುದು ಇವರಿಗೆ ನಿಧಾನವಾಗಿ ಅರ್ಥವಾಗಿತ್ತು. ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು.

ಹೀಗಿರುವಾಗ ಸೇವಾಭಾರತಿಯ ಫೀಲ್ಡ್ ಕಾರ್ಡಿನೇಟರ್ ಮನೆ ಭೇಟಿ ಮಾಡಿ ಸೇವಾಧಾಮ ಹಾಗೂ ಪುನಃಶ್ಚೇತನದ ಅಗತ್ಯತೆಯ ಕುರಿತು ತಿಳಿಸಿದರು. ಅದರಂತೆ ಜನವರಿ 1, 2020ರಲ್ಲಿ ಸೇವಾಧಾಮ ಪುನಃಶ್ಚೇತನ ಕೇಂದ್ರ ಸೌತಡ್ಕಕ್ಕೆ ದಾಖಲಾಗುತ್ತಾರೆ. ವೀಲ್‌ಚೇರ್ ಅನ್ನು ಸಮರ್ಪಕವಾಗಿ ಬಳಸುವ ವಿಧಾನ ತಿಳಿದಿರದ ಅವರು, ಸೇವಾಧಾಮ ಪುನಃಶ್ಚೇತನ ಕೇಂದ್ರದಲ್ಲಿ ಮೂರು ತಿಂಗಳ ತರಬೇತಿಯಿಂದಾಗಿ ವೀಲ್ ಚೇರ್ ಉಪಯೋಗಿಸುವ ಕ್ರಮವನ್ನು ಅನುಸರಿಸುತ್ತಾರೆ. ಜೊತೆಗೆ ಒತ್ತಡ ಗಾಯ ಆಗದೇ ಇರುವ ಮಾಹಿತಿಯನ್ನು ಪಡೆಯುತ್ತಾರೆ. ಇದರ ಮೊದಲು ಎರಡು ಸಲ ಒತ್ತಡ ಗಾಯ ವಾಸಿಯಾಗದೇ ಪ್ಲಾಸ್ಟಿಕ್ ಸರ್ಜರಿ ಮಾಡಿಕೊಂಡಿರುತ್ತಾರೆ.

ಹೀಗೆ ತರಬೇತಿಯನ್ನು ಪಡೆಯುತ್ತಾ ಇವರಿಗೆ ಕನ್ಯಾಡಿ ಸೇವಾಭಾರತಿ ಅಧ್ಯಕ್ಷರಾದ ಕೆ.ವಿನಾಯಕ ರಾವ್ ಅವರು ಇವರಿಗೆ ಸ್ಫೂರ್ತಿಯಾದರು. ಪುನಃಶ್ಚೇತನ ಕೇಂದ್ರದಲ್ಲಿ ಕೆಲಸಕ್ಕೆ ಸೇರಿಕೊಂಡ ದಿನೇಶ್ 5 ತಿಂಗಳ ಕಾಲ ವಾರ್ಡನ್ ಆಗಿ ಕಾರ್ಯನಿರ್ವಹಿಸಿದರು. COVID ಕಾಲಾವಧಿಯಲ್ಲಿ ಕೇಂದ್ರ ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಾಗ ಮನೆಗೆ ಹಿಂದಿರುಗಿದ ದಿನೇಶ್ ಮನೆ ಪಕ್ಕದಲ್ಲಿ ಗೂಡಂಗಡಿಯೊಂದನ್ನು ತೆರೆದು ದಾಪುಗಾಲು ಇರಿಸಿದರು ಎಂಬುದು ರೋಮಾಂಚನಕಾರಿ ಸಾಧನೆ.

ದಿನೇಶ್ ಬಜ್ಪೆ ಇವರ ಯಶೋಗಾಥೆಯನ್ನು ಪರಿಚಯಿಸುವ ಮೂಲಕ ಹತ್ತಾರು ಬೆನ್ನುಹುರಿ ಅಪಘಾತಕ್ಕೊಳಗಾಗಿ ಜೀವನ ಸವೆಸುವ ಜೀವಗಳಿಗೆ ಪ್ರೇರಣೆಯಾಗಲಿ ಎಂಬುದು ನಮ್ಮ ಆಶಯ.